ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp 149-159.
©*IIMRD*, Mysuru
www.iimrd.com

# ತುಮಕೂರು ಜಿಲ್ಲೆಯ ಕೋಟೆಗಳು: ಒಂದು ಅಧ್ಯಯನ

**ಡಾ. ಮುನಿರಾಜು**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಚೆನ್ನರಾಯಪಟ್ಟಣ, ಹಾಸನ ಜಿಲ್ಲೆ.

**ಸಾರಾಂಶ: (Abstract)**

*ಕಲ್ಪತರು ನಾಡು ಎಂದು ಪ್ರಸಿದ್ಧವಾಗಿರುವ ತುಮಕೂರು ಜಿಲ್ಲೆಯು ಕರ್ನಾಟದ ಅತಿ ದೊಡ್ಡ ನಾಲ್ಕನೇ ಜಿಲ್ಲೆಯಾಗಿದೆ. ರಾಜ್ಯ ರಾಜದಾನಿ ತುಂಬಾ ಹತ್ತಿರದಲ್ಲಿರು ಈ ಜಿಲ್ಲೆಯು 10,598 ಚ.ಕಿ.ಮೀ ವಿಸ್ತೀರ್ಣದಲ್ಲಿ ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮದುಗಿರಿ, ಪಾವಗಡ, ಶಿರಾ, ತಿಪಟೂರು, ತುಮಕೂರು ಮತ್ತು ತುರುವೆಕೆರೆ ತಾಲೂಕುಗಳನ್ನು ಒಳಗೊಂಡಿದೆ. ತುಮಕೂರು ಜಿಲ್ಲೆಯು ಎಂಟ ಜಿಲ್ಲೆಗಳೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ. ಉತ್ತರದಲ್ಲಿ ಚಿತ್ರದುರ್ಗ, ಪಶ್ಚಿಮದಲ್ಲಿ ಹಾಸನ ಮತ್ತು ಚಿಕ್ಕಮಗಳೂರು, ನೈಋತ್ಯದಲ್ಲಿ ಮಂಡ್ಯ, ದಕ್ಷಿಣದಲ್ಲಿ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ, ಪೂರ್ವದಲ್ಲಿ ಚಿಕ್ಕಬಳ್ಳಾಪುರ, ಹಾಗೂ ಈಶಾನ್ಯದಲ್ಲಿ ಆಂದ್ರಪ್ರದೇಶದ ಅನಂತಪುರ ಜಿಲ್ಲೆ ಕಂಡು ಬರುತ್ತದೆ. ತುಮಕೂರು ಜಿಲ್ಲೆಯ 2011ರ ಜನಗಣತಿಯ ಪ್ರಕಾರ ಒಟ್ಟು 26,78,780 ಜನರಿದ್ದಾರೆ. ಇದರಲ್ಲಿ 13,50,594 ಪುರುಷರು 13,28,386 ಮಹಿಳೆಯರಿದ್ದಾರೆ. ಇಲ್ಲಿನ ಜನಸಾಂದ್ರತೆ 253 ರಷ್ಟಿದ್ದು, ಸಾಕ್ಷರತೆ ಶೇ.75.14 ರಷ್ಟಿದ್ದು, ಪ್ರತಿ ಸಾವಿರ ಪುರುಷರಿಗೆ 984 ಮಹಿಳೆಯರಿದ್ದಾರೆ. ಪ್ರಸ್ತುತ ಲೇಖನದಲ್ಲಿ ತುಮಕೂರು ಜಿಲ್ಲೆಯಲ್ಲಿರುವ ಕೋಟೆ–ಕೊತ್ತಲಗಳ ಬಗ್ಗೆ ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಕೋಟೆ–ಕೊತ್ತಲ, ತುಮಕೂರು, ಮಧುಗಿರಿ ಕೋಟೆ, ನಿಡುಗಲ್ ಕೋಟೆ.

### ಪೀಠಿಕೆ

ತುಮಕೂರು ಜಿಲ್ಲೆಯ ಐತಿಹಾಸಿಕ ಹಿನ್ನಲೆಯನ್ನು ನೋಡುವುದಾದರೆ ತುಮಕೂರು ಜಿಲ್ಲೆಯನ್ನು ಗಂಗರು, ರಾಷ್ಟ್ರಕೂಟರು, ನೊಳಂಬರು, ಚೋಳರು, ವಿಜಯನಗರದ ಅರಸರು ಮತ್ತು ಮೈಸೂರು ಅರಸರನ್ನೊಳಗೊಂಡಂತೆ ಅನೇಕ ರಾಜಮನೆತನಗಳು ಹಾಗೂ ಪಾಳೆಗಾರ ಮನೆತನಗಳು ಆಡಳಿತ ನಡೆಸಿವೆ. ಬಹಳ ಹಿಂದೆ ಅಂದರೆ 5 ರಿಂದ 10 ನೇ ಶತಮಾನದವರೆಗೆ ಈ ಪ್ರಾಂತ್ಯದ ಬಹುತೇಕ ಭಾಗವು ಗಂಗರ ಒಡೆತನದಲ್ಲಿದ್ದುದರಿಂದ ಗಂಗವಾಡಿಗೆ ಸೇರಿತ್ತು. ಜಿಲ್ಲೆಯ ಉತ್ತರ–ಪಶ್ಚಿಮ ಭಾಗವು 1 ರಿಂದ 11ನೇ ಶತಮಾನದವರೆಗೆ ನೊಳಂಬವಾಡಿಗೆ ಸೇರಿದ್ದು ನೊಳಂಬರು ಆಳ್ವಿಕೆ ನಡೆಸಿದ್ದಾರೆ. ಇವರು ಈಗಿನ

*Please cite this article as: ಮುನಿರಾಜು (2022). ತುಮಕೂರು ಜಿಲ್ಲೆಯ ಕೋಟೆಗಳು: ಒಂದು ಅಧ್ಯಯನ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 149–159.*

ಮಡಕಶಿರಕ್ಕೆ ಹೊಂದಿಕೊಂಡಂತೆ ಇರುವ ಹಂಜೇರನ್ನು, ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. 11ನೇ ಶತಮಾನದಲ್ಲಿ ಗಂಗ ಮತ್ತು ನೊಳಂಬ ಅರಸು ಕುಟುಂಬಗಳ ನಡುವೆ ವೈವಾಹಿಕ ಸಂಬಂಧಗಳು ಏರ್ಪಟ್ಟಿತ್ತು. ನೊಳಂಬ ರಾಜ ಜಯಬ್ಬೆಯನ್ನು ವಿವಾಹವಾದ ನಂತರ ಶಿರಾ ಪ್ರಾಂತ್ಯದ ತನ್ನ ಮಹಾರಾಣಿಯರಿಗೆ ಕೆಲವೊಂದು ಹಳ್ಳಿಗಳಿಗೆ ನೇಮಿಸಿದರು. ಆ ನಂತರ ಹೊಯ್ಸಳರು ಈ ಪ್ರಾಂತ್ಯವನ್ನು ಸಂಪೂರ್ಣವಾಗಿ ಆಳಲಾರಂಬಿಸಿದರು. 14ನೇ ಶತಮಾನದಲ್ಲಿ ಇದು ವಿಜಯನಗರದ ದೊರೆಗಳಿಂದ ಆಳಲ್ಪಟ್ಟಿತು. ಈ ಪ್ರಾಂತ್ಯದಲ್ಲಿ ಅನೇಕ ಚಿಕ್ಕ ಚಿಕ್ಕ ರಾಜ್ಯಗಳು ಅಸ್ತಿತ್ವದಲ್ಲಿದ್ದವು, ಉದಾಹರಣೆಗೆ ಹಾಗಲವಾಡಿ, ಹೊಳವನಹಳ್ಳಿ, ಮಧುಗಿರಿ ಮತ್ತು ನಿಡುಗಲ್. ಆದರೆ ವಿಜಯಪುರದ ಸುಲ್ತಾನರು ದಂಡೆತ್ತಿ ಬಂದ ನಂತರ ಈ ಚಿಕ್ಕರಾಜ್ಯಗಳ ರಾಜರುಗಳನ್ನು ಹೊಡೆದೋಡಿಸಿ ರಾಜ್ಯದ ಉತ್ತರ ಭಾಗವನ್ನು ಸಂಪೂರ್ಣವಾಗಿ ಆದಿಲ್‌ಶಾಹಿ ಆಡಳಿತಕ್ಕೆ ಒಳಪಟ್ಟಿತ್ತು. ಮೊಘಲರ ಗೋಲ್ಕೊಂಡ ಮತ್ತು ಈಗಿನ ವಿಜಯಪುರವನ್ನು ವಶಪಡಿಸಿಕೊಂಡ ನಂತರ ಶಿರಾವನ್ನು ಒಂದು ಪ್ರತ್ಯೇಕ ಪ್ರಾಂತ್ಯವನ್ನಾಗಿ ಮಾಡಿದರು. ಜಿಲ್ಲೆಯ ದಕ್ಷಿಣದ ಪ್ರದೇಶಗಳನ್ನು ಮೈಸೂರು ದೊರೆಗಳು ವಶಪಡಿಸಕೊಂಡು ಚಿಕ್ಕದೇವರಾಜ ಒಡೆಯರವರು ಆಳ್ವಿಕೆ ಮಾಡಿದರು. ಹೀಗೆ 17ನೇ ಶತಮಾನದ ಅಂತ್ಯದ ವೇಳೆಗೆ ಜಿಲ್ಲೆಯ ದಕ್ಷಿಣ ಭಾಗವನ್ನು ಮೈಸೂರಿನ ಅರಸರು ಆಳುತ್ತಿದ್ದರು. 1761 ರಲ್ಲಿ ಹೈದರ್ ಆಲಿಯ ಆಕ್ರಮಣದಿಂದ ಇನ್ನುಳಿದ ಪ್ರದೇಶಗಳು ಮೈಸೂರಿನ ಆಳ್ವಿಕೆಗೆ ಒಳಪಟ್ಟಿತ್ತು. ಟಿಪ್ಪುವಿನ ನಂತರ ಈ ಪ್ರಾಂತ್ಯವನ್ನು ಮೈಸೂರಿನ ಅರಸರು ಮತ್ತೆ ಮರಳಿ ಪಡೆದರು. ಮೂರನೇ ಕೃಷ್ಣರಾಜ ಒಡೆಯರ್‌ರವರ ಅವಧಿಯಲ್ಲಿ ಇದು ಮಧುಗಿರಿ ಪೌಜುದಾರಿಗೆ ಸೇರಿದ್ದಿತು. ಆ ನಂತರ ತುಮಕೂರನ್ನು ಚಿತ್ರದುರ್ಗ ಪ್ರಾಂತ್ಯದೊಂದಿಗೆ ವಿಲೀನಗೊಳಿಸಿ ತುಮಕೂರನ್ನು ಕೇಂದ್ರ ಸ್ಥಾನವನ್ನಾಗಿ ಮಾಡಲಾಯಿತು. ಹೀಗೆ ಮೊದಲಿನಿಂದಲೂ ವಿವಿಧ ಏರಿಳಿಗಳನ್ನು ಕಂಡ ತುಮಕೂರು ಜಿಲ್ಲೆಯಲ್ಲಿ ಬ್ರಿಟಿಷ್ ಆಳ್ವಿಕೆಯ ಕಾಲಘಟ್ಟದಲ್ಲಿ ಸರ್ಕಾರಗಳ ರಚನೆ ಮತ್ತು ಕಾರ್ಯವೈಖರಿಯಲ್ಲಿ ಬದಲಾವಣೆಗಳನ್ನು ತರಲಾಯಿತು.

## ಅಧ್ಯಯನದ ಉದ್ದೇಶ

ಕರ್ನಾಟಕದಲ್ಲಿ ನಿರ್ಮಾಣವಾದ ಕೋಟೆ–ಕೊತ್ತಲಗಳು ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿವೆ. ಕೋಟೆಗಳನ್ನು ರಾಜ ಮಹಾರಾಜರು ತಮ್ಮ ಪ್ರಜೆಗಳು ಮತ್ತು ಪ್ರದೇಶದ ಸಂರಕ್ಷಣೆಗಾಗಿ ಅಂದಿನ ಯುದ್ಧ ಕೌಶಲ್ಯಕ್ಕೆ ಅನುಗುಣವಾಗಿ ಶತ್ರುಗಳನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಲು ನಿರ್ಮಿಸಲಾಗುತ್ತಿತ್ತು. ಬದಲಾದ ಕಾಲಘಟ್ಟದಲ್ಲಿ ಈ ಕೋಟೆಗಳು ತಮ್ಮ ಮಹತ್ವ ಕಳೆದುಕೊಂಡು ಕೇವಲ ಐತಿಹಾಸಿಕ ಸ್ಮಾರಕಗಳಾಗಿ ಜೀವಂತವಾಗಿ ಉಳಿದಿವೆ. ಇವುಗಳನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ.

## ಅಧ್ಯಯನ ವ್ಯಾಪ್ತಿ

ತುಮಕೂರು ಜಿಲ್ಲೆಯಲ್ಲಿ ಹತ್ತು ತಾಲೂಕುಗಳಿದ್ದು, ವಿವಿಧ ಕಾಲಘಟ್ಟದಲ್ಲಿ ಅನೇಕ ರಾಜರುಗಳು ಹಾಗೂ ಪಾಳೆಗಾರರು ಆಳ್ವಿಕೆ ನಡೆಸಿದ್ದಾರೆ. ಇವರು ತಮ್ಮ ರಕ್ಷಣೆಗಾಗಿ ಹಲವಾರು ಕೋಟೆ–ಕೊತ್ತಲಗಳನ್ನು

ತಮ್ಮ–ತಮ್ಮ ವಾಸ್ತುಪ್ರಕಾರದ ಹಿನ್ನಲೆಯಲ್ಲಿ ನಿರ್ಮಿಸಿಕೊಂಡಿದ್ದರು. ತುಮಕೂರು ಜಿಲ್ಲೆಯಲ್ಲಿ ಹೆಚ್ಚಿನದಾಗಿ ಗಿರಿದುರ್ಗಗಳೇ ಕಂಡು ಬರುತ್ತವೆ. ಇವುಗಳ ಅಧ್ಯಯನವು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಇತಿಹಾಸ ಮತ್ತು ಪುರಾತತ್ವಶಾಸ್ತ್ರೀಯ ಸಂಶೋಧನಾ ವಿಧಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ. ಪ್ರಮುಖವಾಗಿ ಈ ಅಧ್ಯಯನಕ್ಕೆ ಕ್ಷೇತ್ರಕಾರ್ಯ ವಿಧಾನವನ್ನು ಹೆಚ್ಚಾಗಿ ಬಳಕೆ ಮಾಡಿಕೊಳ್ಳಲಾಗಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕೋಟೆಗಳ ನಿರ್ಮಾಣದ ಸ್ವರೂಪ, ಉಗ್ರಾಣ, ಕೋಟೆಯ ವಿಸ್ತೀರ್ಣ, ದಿಕ್ಕು, ಕಾವಲುಗಾರರ ಸ್ಥಾನ ಮುಂತಾದವುಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಇದಲ್ಲದೇ ತುಮಕೂರು ಜಿಲ್ಲೆಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಜಿಲ್ಲೆಯ ಗ್ಯಾಸೆಟಿಯರ್, ಜನಗಣತಿ ವರದಿಗಳು, ಪುರಾತತ್ವ ಇಲಾಖೆಯ ದಾಖಲೆಗಳು, ಕನ್ನಡ ಕೈಪಿಡಿ, ಮಾನವ ಅಭಿವೃದ್ಧಿ ವರದಿಗಳು, ಕನ್ನಡ ವಿಷಯ ವಿಶ್ವಕೋಶ, ಎಪಿಗ್ರಪಿಯಾ ಕರ್ನಾಟಿಕ ಮುಂತಾದ ಮೂಲಗಳಿಂದಲೂ ಸಂಗ್ರಹಿಸಿಕೊಳ್ಳಲಾಗಿದೆ. ಅನುಷಂಗಿಕ ಮಾಹಿತಿಯನ್ನು ಗ್ರಂಥಗಳು ಮತ್ತು ಸಂಶೋಧನಾ ಮಹಾಪ್ರಬಂಧಗಳು, ಸಂಶೋಧನಾ ಲೇಖನಗಳು ಮುಂತಾದ ಮೂಲಗಳಿಂದ ಸಂಗ್ರಹಸಿಕೊಳ್ಳಲಾಗಿದೆ.

**ತುಮಕೂರು ಜಿಲ್ಲೆಯ ಕೋಟೆ–ಕೊತ್ತಲುಗಳು**

ತುಮಕೂರು ಜಿಲ್ಲೆ ಐತಿಹಾಸಿಕವಾಗಿ ಮತ್ತು ಪೌರಾಣಿಕವಾಗಿ ಮಹತ್ವತೆಯುಳ್ಳ ಸ್ಥಳವಾಗಿದೆ. ರಾಮಾಯಣ ಕಾಲದಲ್ಲಿ ಶ್ರೀ ರಾಮಚಂದ್ರ, ಲಕ್ಷ್ಮಣ, ಸೀತೆ ಕೆಲ ಕಾಲ ದೇವರಾಯನದುರ್ಗ ಕಾಡಿನಲ್ಲಿ ವನವಾಸ ಕಳೆದರು ಎಂಬುದು ಪುರಾಣದಲ್ಲಿದೆ. ಜಿಲ್ಲೆಯಲ್ಲಿ ಪ್ರಸ್ತಿದ್ದ ಪ್ರೇಕ್ಷಣೀಯ ಸ್ಥಳಗಳಿದ್ದು ಅನೇಕ ದೇವಸ್ಥಾನಗಳು, ಕೋಟೆ–ಕೊತ್ತಲಗಳು, ಬೆಟ್ಟ–ಗುಡ್ಡಗಳು ಪ್ರಮುಖವಾದವುಗಳಾಗಿವೆ. ದೇವರಾಯನದುರ್ಗ, ಮದುಗಿರಿ ಏಕಶಿಲಾ ಬೆಟ್ಟ, ನಿಡಗಲ್ಲು ದುರ್ಗ, ಮಿಡಿಗೇಶಿ ದುರ್ಗ, ಹುಲಿಯೂರು ದುರ್ಗ, ಸಿದ್ಧರಬೆಟ್ಟ ಮುಂತಾದವುಗಳು ಜಿಲ್ಲೆಯ ಪ್ರಸಿದ್ಧ ಬೆಟ್ಟಗಳಾಗಿವೆ. ಇವುಗಳಲ್ಲದೆ ಜಿಲ್ಲೆಯಲ್ಲಿ ಅನೇಕ ಐತಿಹಾಸಿಕ ಮಹತ್ವವುಳ್ಳ ಹಲವಾರು ಕೋಟೆ–ಕೊತ್ತಲಗಳಿದ್ದು, ಮೊದಲೇ ಹೇಳಿದ ಹಾಗೆ ಕೋಟೆ–ಕೊತ್ತಲಗಳು ಪ್ರಜೆಗಳ ರಕ್ಷಣೆ ಮಾಡಲು, ರಾಜ್ಯವನ್ನು ಕಾಪಾಡಲು ಮತ್ತು ಯುದ್ಧದಂತಹ ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಲು ಕೋಟೆಗಳನ್ನು ನಿರ್ಮಿಸಲಾಗುತಿತ್ತು. ಕೋಟೆಗಳನ್ನು ದುರ್ಗವೆಂತಲೂ ಕೂಡ ಕರೆಯುತ್ತಿದ್ದರು.

ತುಮಕೂರು ಜಿಲ್ಲೆಯ ಕೋಟೆ–ಕೊತ್ತಲಗಳು ಕೂಡ ಗತಕಾಲದ, ವೈಭವದ, ಶೌರ್ಯದ, ತ್ಯಾಗ–ಬಲಿದಾನ ಮತ್ತು ಸೌಂದರ್ಯದ ಪ್ರತೀಕಗಳಾಗಿವೆ. ಈ ಹಿನ್ನಲೆಯಲ್ಲಿ ತುಮಕೂರು ಪ್ರದೇಶದ ಕೋಟೆಗಳ ಚರಿತ್ರೆ, ಅವುಗಳ ಮಹತ್ವ, ಕೋಟೆಗಳನ್ನು ನಿರ್ಮಿಸಿರುವ ಉದ್ದೇಶ, ಪ್ರಾಚೀನತೆ, ಪ್ರಕಾರಗಳು ಮತ್ತು ಅವುಗಳಿಂದಾಗುವ ಅನುಕೂಲ ನಿಜಕ್ಕೂ ಮಹತ್ತಾಗಿದೆ. ತುಮಕೂರು ಜಿಲ್ಲೆಯಲ್ಲಿ ಅನೇಕ ಪುರಾತನ ಕೋಟೆಗಳಿದ್ದು, ಬಹುತೇಕ ಕೋಟೆಗಳನ್ನು ಹೊಯ್ಸಳರ ಕಾಲದಲ್ಲಿ ನಿರ್ಮಿಸಲಾಗಿದ್ದು, ಕೆಲವು ಕೋಟೆಗಳನ್ನು ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನನ ಆಳ್ವಿಕೆಯ ಅವಧಿಯಲ್ಲಿ ನವೀಕರಿಸಲಾಗಿದೆ. ಮಧಗಿರಿ ಕೋಟೆ,

ಹುಲಿಯೂರು ದುರ್ಗದ ಕೋಟೆ, ದೇವರಾಯನ ದುರ್ಗ/ಕೋಟೆ, ಮಿಡಿಗೇಶಿ ಕೋಟೆ, ನಿಡಗಲ್ ಬೆಟ್ಟ, ಹುತ್ರಿದುರ್ಗ, ಮುಂತಾದವು.

**ನಿಡುಗಲ್ಲು ಕೋಟೆ**

ನಿಡುಗಲ್ ಕೋಟೆಯು ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಗಡಿಪ್ರದೇಶವಾಗಿದ್ದು, ಸಮುದ್ರ ಮಟ್ಟದಿಂದ 3,722 ಅಡಿ ಎತ್ತರದಲ್ಲಿದೆ. ನಿಡಗಲ್ಲು ಅತ್ಯಂತ ಸುಂದರವಾದ ಪ್ರದೇಶ. ಪ್ರಾಚೀನ ಕಾಲದಲ್ಲಿ ಇದೊಂದು ಜನಭರಿತ ಪ್ರದೇಶವಾಗಿತ್ತೆಂದು ಅಲ್ಲಿ ದೊರಕಿರುವ ಪ್ರಾಚೀನ ಕುರುಹುಗಳಿಂದ ತಿಳಿಯಬಹುದಾಗಿದೆ. ನಿಡುಗಲ್ಲು ಕೋಟೆಯನ್ನು ನಿರ್ಮಿಸಿದ ಕೀರ್ತಿ ನೊಳಂಬ ಪಲ್ಲವರಿಗೆ ಸಲ್ಲುತ್ತದೆ. ಅವರಿಂದ ನಿರ್ಮಿತವಾದ ಕೋಟೆ ಕಾಲಕಾಲಕ್ಕೆ ವಿಸ್ತಾರವಾಗಿ ವಿಜಯನಗರದ ಕಾಲದಲ್ಲಿ ಬಲವಾದ ಕೋಟೆಯಾಗಿ ಮಾರ್ಪಟ್ಟಿತು. ಈ ಕೋಟೆಯಲ್ಲಿ ದೊರೆಯುವ ಶಾಸನವೊಂದರ ಪ್ರಕಾರ, ಬೆಟ್ಟವು ತುಂಬಾ ಎತ್ತರವಾಗಿದ್ದ ಕಾರಣ 1487ರಲ್ಲಿ ನಿಡುಗಲ್ (ಉನ್ನತ ಶಿಖರ) ಎಂದು ಹೆಸರಿಸಲಾಗಿದೆ. ನಿಡುಗಲ್ ಕೋಟೆಯಲ್ಲಿ ಕಾಳೇಶ್ವರ· ಕೋಟೆ, ಭೀರವನ ಕೋಟೆ, ಅರೆಕೋಟೆ, ನಗರೇಶ್ವರ ಕೋಟೆ ಇತ್ಯಾದಿ ಹೆಸರುಗಳಿಂದ ಕರೆಯುವ ಹಲವಾರು ಕೋಟೆ ಸಾಲುಗಳು ಮತ್ತು ನಟನೂರು ಬಾಗಿಲು, ಸಿಂಗರ್ದ–ಬಾಗಿಲು, ಸೀಮಲಯ್ಯನದಿಡ್ಡಿ ಬಾಗಿಲು ಒಳಗೊಂಡಂತೆ ಹಲವಾರು ದ್ವಾರಗಳಿವೆ. ಧಾನ್ಯದ ಸಂಗ್ರಹ ಮಾಡುವ ಭಂಡಾರಗಳಿವೆ. ಕ್ರಿ.ಶ. 1653 ರಲ್ಲಿ ಹೊಟೆಣ್ಣ ನಾಯಕನು ನಿರ್ಮಿಸಿದ ಪಾಳುಬಿದ್ದ ಬಸವನ ಸಣ್ಣ ದೇವಾಲಯವಿದೆ ಮತ್ತು ವರ್ಷಕ್ಕೊಮ್ಮೆ ಬೆಳಗುವ ಕಬ್ಬಿಣದ ದೀಪವಿದೆ. ಸ್ವಲ್ಪ ಕೆಳಗೆ ಕಾಳಹಸ್ತೀಶ್ವರ ದೇವಸ್ಥಾನವಿದೆ, ಇದು ರಾಮನಿಂದ ಸ್ಥಾಪಿಸಲ್ಪಟ್ಟಿತು ಮತ್ತು 1670 ರಲ್ಲಿ ಹರಟಿ ಮುಖ್ಯಸ್ಥ ತಿಮ್ಮಣ್ಣ ನಾಯಕರಿಂದ ನವೀಕರಿಸಲ್ಪಟ್ಟಿತು. ಹೊಕ್ಕರಣೆ ಎಂದು ಕರೆಯಲ್ಪಡುವ ಕೊಳದ ಸಮೀಪ ಪಾಳುಬಿದ್ದ ನಾಗೇಶ್ವರ ದೇವಾಲಯವಿದ್ದು, ಇದನ್ನು ಕ್ರಿ.ಶ. 1115 ರಲ್ಲಿ ನಿರ್ಮಿಸಲಾಗಿದೆ. ಇದಲ್ಲದೆ ಬೆಟ್ಟದ ತಪ್ಪಲಿನಲ್ಲಿ ಸರವದೇಶ್ವರ ದೇವಾಲಯವಿದ್ದು, ಶಾಸನವೊಂದರಲ್ಲಿ ಉಲ್ಲೇಖಿಸಿರುವಂತೆ ಈ ದೇವಾಲಯವನ್ನು ಕ್ರಿ.ಶ 1681 ರಲ್ಲಿ ನಿರ್ಮಿಸಲಾಗಿದೆ.

**ಮಧುಗಿರಿ ಕೋಟೆ**

ತುಮಕೂರು ಜಿಲ್ಲೆಯಲ್ಲಿರುವ ಅನೇಕ ಕೋಟೆಗಳಲ್ಲಿ, ಮಧುಗಿರಿ ಕೋಟೆಯನ್ನು ದಕ್ಷಿಣ ಕರ್ನಾಟಕದ ಅತ್ಯುತ್ತಮ ಕೋಟೆಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಇದನ್ನು 15ನೇ ಶತಮಾನದಲ್ಲಿ ನಿರ್ಮಿಸಲಾಯಿತು, ನಂತರ ಇದನ್ನು ಹೈದರ್ ಅಲಿಯ ಕಾಲದಲ್ಲಿ ಪುನರ್ನಿರ್ಮಿಸಲಾಯಿತು. ಈ ಕೋಟೆಯ ವಾಸ್ತುವಿನ ಅತ್ಯಂತ ಆಸಕ್ತಿದಾಯಕ ವಿಷಯವೆಂದರೆ ಎತ್ತರದ ಬೆಟ್ಟದ ಮೇಲೆ ಬೃಹತ್ ಬಂಡೆಯ ಮೇಲೆ ಇದನ್ನು ನಿರ್ಮಿಸಲಾಗಿದೆ. ಇದು ಬೆಟ್ಟದ ತುದಿಗೆ ಹಲವಾರು ದ್ವಾರಗಳನ್ನು ಹೊಂದಿದೆ ಮತ್ತು ಕೋಟೆಯೊಳಗೆ ಹಲವಾರು ಬುಗ್ಗೆಗಳಿವೆ ಮತ್ತು ಈ ಜಲಾಶಯಗಳಿವೆ. ಇಟ್ಟಿಗೆಗಳಿಂದ ನಿರ್ಮಿಸಲಾದ ಹಂತಗಳನ್ನು ಹೊಂದಿದ್ದು ಇದು ಸಂರಕ್ಷಿತ ಸ್ಮಾರಕವಾಗಿದೆ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ ಆಡಳಿತ ನಿಯಂತ್ರಣದಲ್ಲಿದೆ.

**ಭಸ್ಮಾಂಗಿ ಕೋಟೆ**

ತುಮಕೂರು ನಗರದ ಉತ್ತರಕ್ಕೆ 42 ಕಿಲೋಮೀಟರ್ ದೂರದಲ್ಲಿರುವ ಭಸ್ಮಾಂಗಿ ಎಂಬುದು ಕೋಟೆಯುಳ್ಳ ಒಂದು ಪುಟ್ಟ ಬೆಟ್ಟ. ಇಲ್ಲಿ ಮೊದಲು ಕೋಟೆ ಕಟ್ಟಿದವರು ಬೂದಿಬಸವಪ್ಪ ನಾಯಕ ಎಂಬುವವರು ಮಣ್ಣಿನಲ್ಲಿ ಕೋಟೆ ಕಟ್ಟಿದ್ದರು. ಇದಾದ ನಂತರ ಟಿಪ್ಪು ಸುಲ್ತಾನ್ ತಂದೆ ಹೈದರಾಲಿ ಈ ಪ್ರದೇಶವನ್ನು ಕ್ರಿಸ್ತ ಶಕ–1768ರಲ್ಲಿ ವಶಪಡಿಸಿಕೊಂಡನು. ಬೂದಿ ಬಸವಪ್ಪನಾಯಕ ಕಟ್ಟಿಸಿದ್ದ ಮಣ್ಣಿನ ಕೋಟೆಯನ್ನು ಕೆಡವಿ ಇಟ್ಟಿಗೆ ಮತ್ತು ಕಲ್ಲಿನಿಂದ ಕೋಟೆಯನ್ನೂ ಅರಮನೆಯನ್ನೂ ಕಟ್ಟಿಸಿದ. ಭಸ್ಮಾಂಗಿ ಕೋಟೆ ಬಿಜವರ ತೋಟದ ಸಿದ್ಧಲಿಂಗ ಭೂಪಾಲ ಮತ್ತು ಮುಮ್ಮಡಿ ಚಿಕ್ಕಭೂಪಾಲ ಈ ಇಬ್ಬರು ಪ್ರಸಿದ್ಧ ದೊರೆಗಳ ಕೇಂದ್ರವಾಗಿತ್ತು. ಮುಮ್ಮಡಿ ಚಿಕ್ಕ ಭೂಪಲ ಕನ್ನಡ ಮತ್ತು ಸಂಸ್ಕೃತಕ್ಕೆ ಪ್ರೋತ್ಸಾಹ ನೀಡುತ್ತಿದ್ದನು. ಅಲ್ಲದೆ ತಾನೇ ಅಭಿನವ ಭಾರತ ಸೌರಸಂಗ್ರಹವೆಂಬ ಸಂಸ್ಕೃತ ಗ್ರಂಥವನ್ನು ಬರೆದಿದ್ದನು. ಚಿಕ್ಕದೇವರಾಜ 17ನೆಯ ಶತಮಾನದ ಅಂತ್ಯದಲ್ಲಿ ಇದನ್ನು ಗೆದ್ದಕೊಂಡುನು. ಹಿಂದೆ ಇದು ಪಾಳೆಯಪಟ್ಟಿನ ಕೇಂದ್ರವಾಗಿತ್ತು. ಮಧುಗಿರಿಯ ವಾಯವ್ಯದಲ್ಲಿರುವ ಸಿದ್ಧಾಪುರದಲ್ಲಿ ಒಂದು ಹಳೆ ಕೋಟೆ ಇದೆ. ಇಲ್ಲಿಯ ಶಾಸನದ ಪ್ರಕಾರ ಬಿಜವರದ ಮಹಾನಾಡುಪ್ರಭು ಚಿಕ್ಕಪ್ಪಗೌಡ ಕ್ರಿಸ್ತ ಶಕ–1593ರಲ್ಲಿ ಭಸ್ಮಾಂಗಿ ಕಟ್ಟಿದನೆಂದು ತಿಳಿದುಬರುತ್ತದೆ

ಭಸ್ಮಾಂಗಿ ಕೋಟೆಯು ಬಡವನಹಳ್ಳಿ ಮೂಲಕ ಹಾದು ಹೋದರೆ 20 ಕಿಲೋಮೀಟರ್ ದೂರವಾಗುತ್ತದೆ. ಆದಾಗ್ಯೂ, ಬಡವನಹಳ್ಳಿಗಿಂತ ಮುಂಚೆಯೇ ರಾಜ್ಯ ಹೆದ್ದಾರಿ ಅಂತ್ಯಗೊಳ್ಳುತ್ತದೆ. 6 ಕಿಲೋಮೀಟರ್ ಉತ್ತಮ ರಸ್ತೆಯಿದೆ ಉಳಿದಂತೆ ಮುಂದಕ್ಕೆ ಹೋದಂತೆ ರಸ್ತೆ ಹಾಳಾಗಿದೆ. ಈ ಬೆಟ್ಟವು ಪಶ್ಚಿಮ ಭಾಗದಲ್ಲಿ ಹೆಚ್ಚಾಗಿ ಕಲ್ಲುಹೂವು ಮತ್ತು ಪೂರ್ವ ಭಾಗದಲ್ಲಿ ಬಂಡೆಗಳ ಮಿಶ್ರಣವಾಗಿದೆ. ಇಲ್ಲಿ ಎರಡು ಗುಡಿಗಳಿದ್ದು, ಒಂದು ಗುಡಿ ಹನುಮಂತನಿಗೆ ಅರ್ಪಿತವಾದ ದೇವಾಲಯವಾಗಿದೆ.

ಕೋಟೆಯ ಮೊದಲ ಹೆಬ್ಬಾಗಿಲು ಹೊರಗಿನ ಮಾರ್ಗವು ಎತ್ತರಿಸಿದ ವೇದಿಕೆಗಳಿಂದ ಸುತ್ತುವರಿದಿದೆ. ಇಲ್ಲಿ ಕಲ್ಲಿನ ಮೇಲೆ ಮೀನಿನ ಚಿತ್ರವನ್ನು ಕೆತ್ತಲಾಗಿದೆ ಈ ಮೀನು ಕೋಟೆಗೆ ಎದುರಾಗಿದೆ. ಮೀನು ಸಿರಿ ಸಂಪತ್ತಿನ ಸೂಚನೆಯಾಗಿದೆ. ಕಲ್ಲಿನ ಆನೆಯ ಹತ್ತಿರ ಒಂದು ಮೀನಿನ ಉಬ್ಬು ಶಿಲ್ಪವಿದ್ದು, ಸುಮಾರು ಏಳು ನಿಮಿಷಗಳ ಕಾಲ ನಡೆದರೆ ಎರಡನೆಯ ಹೆಬ್ಬಾಗಿಲು ಸಿಗುತ್ತದೆ. ಇಲ್ಲಿ ಎರಡು ಮಾರ್ಗಗಳಿವೆ. ಒಂದು ಮಾರ್ಗ ನೇರವಾಗಿದ್ದರೆ, ಮತ್ತೊಂದು ಗೋಡೆಯು ಉದ್ದಕ್ಕೂ ಏರು ದಾರಿಯದ್ದಾಗಿದೆ. ಈ ಕೋಟೆಯ ಮುಖ್ಯ ಭಾಗಕ್ಕೆ ಸಂಪರ್ಕಿಸುವ ಹೆಬ್ಬಾಗಿಲುಗಳ ಪೈಕಿ ಇದು ಒಂದಾಗಿದೆ. ಭಸ್ಮಾಂಗಿ ಕೋಟೆಯು ಹಲವು ಗೋಡೆಗಳು, ಕೊತ್ತಲಗಳು ಮತ್ತು ಹೆಬ್ಬಾಗಿಲುಗಳೊಂದಿಗೆ ಸಂಕೀರ್ಣವಾಗಿದೆ. ಈ ಕೋಟೆಯಲ್ಲಿ ಗೂಡುಗಳಂತಹ ರಚನೆಗಳು ಇಲ್ಲಿ ಸಾಮಾನ್ಯವಾಗಿವೆ. ಇವು ಶತ್ರುಗಳು ದಾಳಿಮಾಡಿದರೆ ತಪ್ಪಿಸಿಕೊಂಡು ಹೋಡಿ ಹೋಗುವ ಸುರಂಗ ಮಾರ್ಗಗಳಾಗಿವೆ. ಈ ಕೋಟೆಯನ್ನು ಹೆಚ್ಚಾಗಿ ಸೇನಾನೆಲೆ ಮತ್ತು ಮದ್ದುಗುಂಡುಗಳನ್ನು ಸಂಗ್ರಹಿಸುವುದಕ್ಕೆ ಬಳಸುತ್ತಿದ್ದರು ಎಂಬುದಾಗಿ ಹಿರಿಯ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಈ ಕೋಟೆಯಲ್ಲಿ ಅನೇಕ ನೀರಿನ ಕೊಳಗಳು ಇವೆ. ಇಳಿಜಾರಿನ ಭದ್ರಕೋಟೆಗಳನ್ನು ಗಮನಿಸಿದರೆ ನೀರಿನ ಕೊಳಗಳು ಕಾಣಸಿಗುತ್ತದೆ. ಭಸ್ಮಂಗಿ ಕೋಟೆಯನ್ನು ಶತ್ರುಗಳಿಂದ ರಕ್ಷಿಸಿ ಬಲಪಡಿಸಲು ಫ್ರೆಂಚ್

ಎಂಜಿನಿಯರ್‌ಗಳನ್ನು ಟಿಪ್ಪು ಸುಲ್ತಾನ್ ನೇಮಕ ಮಾಡಿದ್ದನು ಎಂದು ತುಮಕೂರು ಗೆಜೇಟಿಯರ್‌ನಿಂದ ತಿಳಿಯುತ್ತದೆ.

**ಹುತ್ರಿದುರ್ಗದ ಕೋಟೆ**

ಉತ್ತರಿ ಬೆಟ್ಟ ಎಂದು ಕರೆಯಲ್ಪಡುವ ಹುತ್ರಿದುರ್ಗವು ಕುಣಿಗಲ್ ತಾಲೂಕಿನ ಆಗ್ನೇಯ ಭಾಗದಲ್ಲಿರುವ ಕೋಟೆಯ ಬೆಟ್ಟವಾಗಿದೆ. ಈ ಕೋಟೆಯು ತಾಲೂಕು ಕೇಂದ್ರದಿಂದ 15 ಕಿ.ಮೀ ದೂರದಲ್ಲಿದೆ. ಈ ಬೆಟ್ಟವು ಸಮುದ್ರ ಮಟ್ಟದಿಂದ 3,708 ಅಡಿಗಳಷ್ಟು ಎತ್ತರದಲ್ಲಿದೆ. ಈ ಕೋಟೆಯು ಕುಣಿಗಲ್–ಮಾಗಡಿ ನಡುವೆ ಕಂಡುಬರುತ್ತದೆ. ಹುತ್ರಿದುರ್ಗವನ್ನು 16ನೇ ಶತಮಾನದಲ್ಲಿ ಕೆಂಪೇಗೌಡರು ನಿರ್ಮಿಸಿದರು. ಗ್ರಾಮದ ಸುತ್ತ ಪಾಳುಬಿದ್ದ ಕೋಟೆಗಳು ಗೋಚರಿಸುತ್ತವೆ. ಹುತ್ರಿದುರ್ಗ ಕೋಟೆಯು ಬ್ರಿಟಿಷರ ವಿರುದ್ಧ ಹೋರಾಡಲು ಟಿಪ್ಪು ಸುಲ್ತಾನನ ಸೇನಾ ಭದ್ರಕೋಟೆಯಾಗಿತ್ತು. ಹುತ್ರಿದುರ್ಗದ ಕೋಟೆಯು ಏಳು ಹಂತದ ಕೋಟೆಯಾಗಿದ್ದು, ಬೆಂಗಳೂರು ಸುತ್ತಮುತ್ತಲಿರು ನವದುರ್ಗ (ಒಂಭತ್ತು) ಕೋಟೆಗಳಲ್ಲಿ ಇದು ಕೂಡ ಒಂದಾಗಿದೆ. ಹುತ್ರಿದುರ್ಗವು ಪ್ರಮುಖ ಧಾರ್ಮಿಕ ಸ್ಥಳವಾಗಿರುವುದು ಜೊತೆಗೆ ಈ ಕೋಟೆಯನ್ನು ಬೇಸಿಗೆಯಲ್ಲಿ ಆಡಳಿತದ ಕೇಂದ್ರವಾಗಿ ಬಳಸಲಾಗುತಿತ್ತು. ಯುದ್ಧದ ಕಮಾಂಡರ್, ಸೈನಿಕರು ಮತ್ತು ಸ್ವತಃ ಕೆಂಪೇಗೌಡರು ಕೂಡ ಈ ಕೋಟೆಯನ್ನು ಬಳಸುತ್ತಿದ್ದರು.

ಹುತ್ರಿದುರ್ಗ ಕೋಟೆಯು ಹಲವಾರು ಹೊರ ದ್ವಾರಗಳ ಜೊತೆಗೆ ಬುಡದಿಂದ ಶಿಖರದವರೆಗೆ ಎಂಟು ದ್ವಾರಗಳನ್ನು ಹೊಂದಿದೆ. ಅವುಗಳಲ್ಲಿ ಏಳುಮಾರು ಬಾಗಿಲು, ಬಾಳಿಕಟ್ಟೆ ಬಾಗಿಲು ಮತ್ತು ಮಾಗಡಿಬಾಗಿಲುಗಳು ಪ್ರಮುಖವಾದವುಗಳಾಗಿವೆ. ಸುಮಾರು 112 ಸೆಂ.ಮೀ ವ್ಯಾಸದ ಬೃಹತ್ ರುಬ್ಬುವ ಕಲ್ಲು ಕೂಡ ಇದೆ. ಬಹುಶಃ ಹಿಟ್ಟು ರುಬ್ಬಲು ಇದನ್ನು ಬಳಸುತ್ತಿದ್ದಿರುಬಹುದು. ಅಲ್ಲಿ ರಾಜರು ಮತ್ತು ಪಾಳೇಗಾರರು ತಮ್ಮ ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸಲು ಬಳಸುತ್ತಿದ್ದರು. ಆನೆಯನ್ನು ಹೋಲುವ ಆನೆ ಬಂಡೆ ಅಥವ ಗಡಾಯಿ ಕಲ್ಲನ್ನು ನೈಸರ್ಗಿಕ ಕಾವಲು ಗೋಪುರವಾಗಿ ಬಳಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸರಿಯಾದ ರೀತಿಯ ನಿರ್ವಹಣೆಯಿಲ್ಲದೆ ಹಾಳಾಗುತ್ತಿರುವುದನ್ನು ಕಾಣಬಹುದಾಗಿದೆ.

**ಹುಲಿಯೂರು ದುರ್ಗದ ಕೋಟೆ**

ಹುಲಿಯೂರು ದುರ್ಗದ ಕೋಟೆಯನ್ನು 'ಕುಂಬಿಬೆಟ್ಟ' ಎಂತಲೂ ಕರೆಯುತ್ತಾರೆ. ಈ ಬೆಟ್ಟದ ಕೋಟೆಯನ್ನು ಕೂಡ ಶ್ರೀ ಕೆಂಪೇಗೌಡರು ನಿರ್ಮಿಸಿದರು. ಈ ಬೆಟ್ಟವು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಬೆಟ್ಟದ ಕೋಟೆಯಾಗಿ ಸಂಯೋಜಿಸಲ್ಪಟ್ಟ ನೈಸರ್ಗಿಕ ಪ್ರಯೋಜನಗಳನ್ನು ಹೊಂದಿದೆ. ನಂತರ ಈ ಕೋಟೆಯು ಚಿಕ್ಕ ದೇವರಾಯ ಒಡೆಯರ್, ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಆಳ್ವಿಕೆಗೆ ಒಳಪಟ್ಟಿತು, ನಂತರ ಅಂತಿಮವಾಗಿ 1792 ರಲ್ಲಿ ಮರಾಠರು ಮತ್ತು ಬ್ರಿಟಿಷರು ಒಟ್ಟಾಗಿ ಕೋಟೆಗೆ ಮುತ್ತಿಗೆ ಅಂತಿಮವಾಗಿ ವಶಪಡಿಸಿಕೊಂಡು ನಾಶಪಡಿಸಿದರು. ಹುಲಿದುರ್ಗಕೋಟೆಯ ಮೇಲ್ಭಾಗದಲ್ಲಿ ಕೆಲವು ಕಟ್ಟಡಗಳ ಅವಶೇಷಗಳು, ನೀರಿನ ಬುಗ್ಗೆಗಳು (ನೀರಿನ ಕೊಳಗಳು), ದರ್ಬಾರ್ ಹಾಲ್, ಧಾನ್ಯ ಸಂಗ್ರಹಗಾರಗಳಿದ್ದ ಕುರುಹುಗಳಿವೆ.

**ದೇವರಾಯನ ದುರ್ಗ/ಕೋಟೆ**

ದೇವರಾಯನ ದುರ್ಗ ಕೋಟೆಯು ತುಮಕೂರು ತಾಲೂಕಿಗೆ ಸೇರಿದ ಪ್ರಮುಖ ಕೋಟೆಯಾಗಿದೆ. ಇದು ತಾಲೂಕಿನ ಪೂರ್ವಕ್ಕೆ 14 ಕಿ.ಮೀ. ದೂರದಲ್ಲಿದೆ. ಸಮುದ್ರಮಟ್ಟದಿಂದ 3,896 ಅಡಿ ಎತ್ತರವಾಗಿರುವ ಅದೇ ಹೆಸರಿನ ಬೆಟ್ಟದ ಮೇಲೆ ಏಳು ದ್ವಾರಗಳುಳ್ಳ ಕೋಟೆ ಇದೆ. ಹಿಂದೆ ಅಂಧಕನೆಂಬ (ಲಿಂಗಕ) ದರೋಡೆಕೋರ ಈ ಬೆಟ್ಟದಲ್ಲಿ ವಾಸವಾಗಿದ್ದನೆಂದೂ ಕರ್ನಾಟಕ ರಾಜ ಹೇಮಚಂದ್ರನ ಮಗ ಸುಮತಿ ಎಂಬವನು ಅವನನ್ನು ಸೋಲಿಸಿ ಇದನ್ನು ವಶಪಡಿಸಿಕೊಂಡನೆಂದೂ ಐತಿಹ್ಯವಿದೆ. ಮತ್ತೊಂದು ಐತಿಹ್ಯದ ಪ್ರಕಾರ ಗಂಧರ್ವನೊಬ್ಬ ಆನೆಯ ರೂಪದಲ್ಲಿ ಈ ಬೆಟ್ಟದಲ್ಲಿ ವಾಸವಾಗಿದ್ದನೆಂದೂ ಒಂದು ದಿನ ಮದೋನ್ಮತ್ತನಾಗಿ ಕಡಿದಾದ ಬಂಡೆಯನ್ನೇರಲು ಹೋಗಿ ಜಾರಿಬಿದ್ದು ಸತ್ತದ್ದರಿಂದ ಆ ಸ್ಥಳಕ್ಕೆ ಆನೆಬಿದ್ದಸರಿ, ಆನೆಬಿದ್ದ ಝುರಿ ಎಂದೂ ಹೆಸರು ಬಂದಿತೆಂದೂ ಇನ್ನೊಂದು ಕಥೆಯಿದೆ. ಹೊಯ್ಸಳರ ಕಾಲದಲ್ಲಿ ಬೆಟ್ಟದ ಮೇಲೆ ಆನೆಬಿದ್ದಸರಿ (ಆನೆ ಬಿದ್ದ ಝುರಿ) ಎಂಬ ಹೆಸರಿನ ಊರಿತ್ತೆಂದು ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿ ಈ ದುರ್ಗಕ್ಕೆ ಕರಿಗಿರಿ ಎಂಬ ಹೆಸರಿತ್ತು. ಇಲ್ಲಿನ ಹಳ್ಳವೊಂದಕ್ಕೆ ಅಡ್ಡಲಾಗಿ ಬುಕ್ಕಸಮುದ್ರವೆಂಬ ಕೆರೆಯನ್ನು ನಿರ್ಮಿಸಿದ್ದರೆಂದು ತಿಳಿಯುತ್ತದೆ. ಅನಂತರ ಈ ದುರ್ಗಕ್ಕೆ ಜಡಕ ಎಂಬ ಪಾಳೆಯಗಾರನ ವಶವಾಗಿದ್ದರಿಂದ ಇದಕ್ಕೆ ಜಡಕದುರ್ಗವೆಂಬ ಹೆಸರು ಬಂತು. 1696ರಲ್ಲಿ ಚಿಕ್ಕದೇವರಾಯ ಒಡೆಯರು ಇದನ್ನು ವಶಪಡಿಸಿಕೊಂಡ ಮೇಲೆ ಇದಕ್ಕೆ ದೇವರಾಯನದುರ್ಗ ಎಂಬ ಹೆಸರು ಬಂತು.

ಬೆಟ್ಟದಲ್ಲಿ ಮೂರು ಪ್ರತ್ಯೇಕ ಹಂತಗಳಿವೆ. ಕೆಳಗಿನ ಹಂತದಲ್ಲಿ ದೇವರಾಯನ ದುರ್ಗ ಗ್ರಾಮವೂ ಒಂದನೆಯ ಕಂಠೀರವ ನರಸರಾಜ ಒಡೆಯ ಕಟ್ಟಿಸಿದ ದ್ರಾವಿಡ ಶೈಲಿಯ ದುರ್ಗಾನರಸಿಂಹ ದೇವಾಲಯವೂ ಇವೆ. ಸಂಜೀವರಾಯನೆಂದು ಕರೆಯುವ ಹನುಮಂತನ ದೇವಸ್ಥಾನವೂ ಇಲ್ಲಿದೆ. ಮಧ್ಯದ ಹಂತದಲ್ಲಿ ಮಿಶನರಿ ಬಂಗಲೆ ಮತ್ತು ಸರ್ಕಾರಿ ಪ್ರವಾಸಿಮಂದಿರವೂ ರಾಮತೀರ್ಥ, ಧನುಷ್ ತೀರ್ಥ ಎಂಬ ಎರಡು ದೊಣೆಗಳೂ ಇವೆ. ಹತ್ತಿರದ ಗುಹೆಯೊಂದರಲ್ಲಿ ರಾಮ, ಸೀತೆ ಮತ್ತು ಲಕ್ಷ್ಮಣರ ವಿಗ್ರಹಗಳಿವೆ.

ಮೂರನೆಯ ಹಂತದಲ್ಲಿ ಕುಂಬೀನರಸಿಂಹನ ದೇವಸ್ಥಾನವಿದೆ. ಇದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದ್ದು. ಇಲ್ಲಿ ನರಸಿಂಹತೀರ್ಥ, ಪಾದತೀರ್ಥ, ಪರಾಶರತೀರ್ಥ ಎಂಬ ಮೂರು ಪವಿತ್ರ ದೊಣೆಗಳುಂಟು. ಸ್ವಲ್ಪ ಎತ್ತರದಲ್ಲಿ ಗರುಡನ ಗುಡಿಯೂ ದೀವಿಗೆ ಗುಂಡು ಎಂದು ಕರೆಯಲ್ಪಡುವ ದೊಡ್ಡ ಬಂಡೆಯೂ ಇವೆ. ತಮ್ಮ ಇಷ್ಟಪೂರ್ತಿಗಾಗಿ ಹರಕೆ ಕಟ್ಟಿಕೊಂಡವರು ಇಲ್ಲಿರುವ ದೀಪವನ್ನು ಬೆಳಗಿಸುತ್ತಾರೆ, ಬೆಟ್ಟದಿಂದ ಸ್ವಲ್ಪದೂರದಲ್ಲಿರುವ ಅರಣ್ಯ ಇಲಾಖೆಯ ವಿಶ್ರಾಂತಿ ಗೃಹದ ಬಳಿ ಆರತಿ ಬಂಡೆ ಇದೆ. ಮೈಸೂರು ರಾಜರು ಬಂದಾಗ ಆ ಸ್ಥಳದಲ್ಲಿ ಆರತಿ ಬೆಳಗಿ ಅವರನ್ನು ಸ್ವಾಗತಿಸುತ್ತಿದ್ದುದರಿಂದ ಆ ಬಂಡೆಗೆ ಈ ಹೆಸರು ಬಂತೆಂದು ಪ್ರತೀತಿ. ಇದರ ಹತ್ತಿರವೇ ನಾಮದ ಚಿಲುಮೆ ಇದೆ. ಕಡೆದಿರುವ ಒರಳುಕಲ್ಲಿನಲ್ಲಿನಿಂದ ಇಲ್ಲಿ ನೀರು ಸದಾ ಹರಿಯುತ್ತಿರುತ್ತದೆ. ಇಲ್ಲಿರುವ ಜಲಗುಂಡಿ ಎಂಬ ಕೊರಕಲ್ಲಿನಲ್ಲಿ ಮಂಗಲಿ ನದಿಯೂ ಜಯತೀರ್ಥವೆಂಬ ಚಿಕ್ಕ ಚಿಲುಮೆಯಿಂದ ಜಯಾ ನದಿಯೂ ಹರಿದು ತಪ್ಪಲಲ್ಲಿ ಒಂದಾಗಿ ಜಯಮಂಗಲೀ ನದಿಯಾಗಿ ಮುಂದುವರೆಯುತ್ತವೆ. ಈ ಬೆಟ್ಟದಲ್ಲಿ ಶಿಂಷಾನದಿ ಉಗಮಿಸುವುದೆಂದೂ ಹೇಳುತ್ತಾರೆ. ಪ್ರತಿ ವರ್ಷ ಚೈತ್ರಮಾಸದಲ್ಲಿ ಇಲ್ಲಿ

ದುರ್ಗಾನರಸಿಂಹನ ಜಾತ್ರೆ ನಡೆಯುತ್ತದೆ. ಇತ್ತೀಚಿಗೆ ಈ ಸ್ಥಳ ಪ್ರಮುಖ ಪ್ರವಾಸಿಕೇಂದ್ರವಾಗಿ ಅಭಿವೃದ್ಧಿಯಾಗುತ್ತಿದೆ.

**ಚನ್ನರಾಯನ ದುರ್ಗ**

ಚೆನ್ನರಾಯನ ದುರ್ಗವು ಮಧುಗಿರಿ ತಾಲೂಕಿನಲ್ಲಿ ಕಂಡು ಬರುತ್ತದೆ. ಈ ಕೋಟೆಯು ತಾಲೂಕು ಕೇಂದ್ರದಿಂದ 10 ಕಿ.ಮೀ ಮತ್ತು ಜಿಲ್ಲಾ ಕೇಂದ್ರದಿಂದ 36 ಕಿ.ಮೀ ಅಂತರದಲ್ಲಿದೆ. ಈ ಕೋಟೆಯನ್ನು 17ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ಈ ಕೋಟೆಯು ಸಮುದ್ರಮಟ್ಟದಿಂದ ಮೂರೂಮುಕ್ಕಾಲು ಸಾವಿರ ಅಡಿ ಎತ್ತರದಲ್ಲಿದ್ದು, ಮಧುಗಿರಿಯ ಪಾಳೇಗಾರ ವಂಶಕ್ಕೆ ಸೇರಿದ ಚಿಕ್ಕಪ್ಪಗೌಡ ನಿರ್ಮಿಸಿರುವುದಾಗಿ ಇತಿಹಾಸದಲ್ಲಿ ದಾಖಲುಗಳಿವೆ. ಅನೇಕ ವರ್ಷಗಳ ಕಾಲ ಮಧುಗಿರಿಯ ಪಾಳೇಗಾರರ ವಶದಲ್ಲೇ ಇದ್ದ ಈ ಕೋಟೆಯು ಮರಾಠರ ಆಕ್ರಮಣಕ್ಕೆ ತುತ್ತಾದಾಗ ಅವರ ಕೈವಶವಾಯಿತು. ನಂತರ ತುಮಕೂರು ಜಿಲ್ಲೆಯು ಮೈಸೂರು ಮಹಾರಾಜರ ಆಡಳಿತ ನಡೆಸುವಾಗಿ ಮೈಸೂರಿನ ಅರಸ ಚಿಕ್ಕದೇವರಾಯ ಒಡೆಯರ್ ಆಳ್ವಿಕೆಯಲ್ಲಿ ಚನ್ನರಾಯನದುರ್ಗ ಮೈಸೂರು ಸಂಸ್ಥಾನದ ಭಾಗವಾಯಿತು. ಆಗ ಇಲ್ಲಿಗೆ ಪ್ರಸನ್ನಗಿರಿ ಎಂಬ ಹೆಸರಿತ್ತಂತೆ. ನಡುವೆ ಮತ್ತೊಮ್ಮೆ ಮರಾಠರ ಪಾಲಾದ ಈ ದುರ್ಗ ಚಂದ್ರಾಯದುರ್ಗವೆಂದೂ ಕರೆಸಿಕೊಂಡಿತ್ತು, ಮರಾಠ ಸೇನಾಧಿಕಾರಿಗಳಾದ ಶ್ರೀಪಂತ ಪ್ರಧಾನ ಹಾಗೂ ಮಾಧವರಾಯ ಬಲ್ಲಾಳ ಪ್ರಧಾನರ ಹೆಸರಿನಲ್ಲಿರುವ 1766ರ ಶಿಲಾಶಾಸನವನ್ನು ಕೋಟೆಯ ದ್ವಾರದಲ್ಲಿ ಈಗಲೂ ಕಾಣಬಹುದು. ಟಿಪ್ಪುವಿನ ಪ್ರಾಬಲ್ಯದ ಸಮಯದಲ್ಲಿ ಚನ್ನರಾಯದುರ್ಗ ಮತ್ತೆ ಮೈಸೂರು ಸಂಸ್ಥಾನಕ್ಕೆ ಸೇರಿತು. ಅಂತಿಮವಾಗಿ ಮೂರನೆಯ ಮೈಸೂರು ಯುದ್ಧದ ಸಂದರ್ಭದಲ್ಲಿ ಲೆಫ್ಟಿನೆಂಟ್ ಕರ್ನಲ್ ಮ್ಯಾಕ್ಸ್‌ವೆಲ್ ಎಂಬಾತನ ನೇತೃತ್ವದಲ್ಲಿದ್ದ ಬ್ರಿಟಿಷ್ ಸೇನೆ ಈ ದುರ್ಗವನ್ನು ಆಕ್ರಮಿಸಿಕೊಂಡಿತು. ನಂತರದ ದಿನಗಳಲ್ಲಿ ತನ್ನದೇ ಹೆಸರಿನ ತಾಲೂಕಿನ ಕೇಂದ್ರವಾಗಿದ್ದ ಚನ್ನರಾಯನ ದುರ್ಗ ಈಗ ಪುಟ್ಟದೊಂದು ಅಜ್ಞಾತ ಹಳ್ಳಿಯಾಗಿ ಉಳಿದುಕೊಂಡಿದೆ.

**ಮಿಡಿಗೇಶಿ ಕೋಟೆ**

ಮಿಡಿಗೇಶಿ ಕೋಟೆಯೂ ಕೂಡ ತುಮಕೂರು ಜಿಲ್ಲೆಯ ಪ್ರಮುಖ ಕೋಟೆಗಳಲ್ಲಿ ಒಂದಾಗಿದ್ದು, ಮಧುಗಿರಿಯಿಂದ 23 ಕಿ.ಮೀ, ತುಮಕೂರಿನಿಂದ 68 ಕಿ.ಮೀ ಅಂತರದಲ್ಲಿದೆ. ರಾಜ್ಯ ರಾಜಧಾನಿ ಬೆಂಗಳೂರಿನಿಂದ 125 ಕಿಮೀ ದೂರದಲ್ಲಿದೆ. ಈ ಕೋಟೆಯು ಜಿಲ್ಲೆಯ ಮಿಡಿಗೇಶಿ ಗ್ರಾಮದಲ್ಲಿ ನೆಲೆಗೊಂಡಿರುವ ಪುರಾತನ ಬೆಟ್ಟದ ಕೋಟೆಯಾಗಿದೆ. ಇದು ಕರ್ನಾಟಕದ ಪ್ರಸಿದ್ಧ ಪರಂಪರೆಯ ಸ್ಥಳಗಳಲ್ಲಿ ಒಂದಾಗಿದೆ. 2,581 ಅಡಿ ಎತ್ತರದಲ್ಲಿರುವ ಮಿಡಿಗೇಶಿ ಕೋಟೆಯನ್ನು ವಿಜಯನಗರ ಕಾಲದಲ್ಲಿ ನಾಗಿರೆಡ್ಡಿ ಎಂಬ ಮುಖ್ಯಸ್ಥರು ನಿರ್ಮಿಸಿದರು. ನಾಗಿರೆಡ್ಡಿ ನಂತರ, ಚಿಕ್ಕಪ್ಪಗೌಡ ಮಧುಗಿರಿ ಮತ್ತು ಚನ್ನರಾಯನ ದುರ್ಗವನ್ನು ಸ್ವಾಧೀನಪಡಿಸಿಕೊಂಡ ನಂತರ ಮಿಡಿಗೇಶಿ ಕೋಟೆಯನ್ನು ವಶಪಡಿಸಿಕೊಂಡನು. ಹೈದರ್ ಅಲಿ 1761 ರಲ್ಲಿ ಈ ಕೋಟೆಯನ್ನು ವಶಪಡಿಸಿಕೊಂಡು 1767ರವರೆಗೂ ಕೆಲಕಾಲ ಆಳ್ವಿಕೆ ಮಾಡಿದನು. ಆದರೆ 1767 ರಲ್ಲಿ ಮರಾಠರು ಸ್ವಾಧೀನ ಪಡಿಸಿಕೊಂಡರೂ ಟಿಪ್ಪು ಸುಲ್ತಾನ್ 1774 ರಲ್ಲಿ ಕೋಟೆಯನ್ನು

ಮತ್ತೇ ಸ್ವಾಧೀನಪಡಿಸಿಕೊಂಡರು. ಅಂತಿಮವಾಗಿ, ಇದನ್ನು ಲಾರ್ಡ್ ಕಾರ್ನ್‌ವಾಲಿಸ್ ನೇತೃತ್ವದಲ್ಲಿ ಬ್ರಿಟಿಷ್ ಪಡೆಗಳು ವಶಪಡಿಸಿಕೊಂಡವು.

ಮಿಡಿಗೇಶಿ ಕೋಟೆಯು ಏಳು ಬೃಹತ್ ದ್ವಾರಗಳನ್ನು ಮತ್ತು ಹಲವಾರು ಮಂಟಪಗಳನ್ನು ಹೊಂದಿತ್ತು, ಆದರೆ ಮೂರು ಕಮಾನುಗಳನ್ನು ಹೊಂದಿರುವ ಪಾಳುಬಿದ್ದ ಮಸೀದಿ, ಉತ್ತಮವಾದ ಲ್ಯಾಟ್ರೈಸ್ಡ್ ವಿನ್ಯಾಸದೊಂದಿಗೆ ಎರಡು ಮಿನಾರ್‌ಗಳು ಮತ್ತು ಕೆಲವು ಧಾನ್ಯ ಸಂಗ್ರಹಗಳು ಈಗ ಹಾಗೇ ಇವೆ. ಸಮೀಪದಲ್ಲಿ, ಹನುಮಂತನ ದೇವಾಲಯವನ್ನು ಸಹ ಕಾಣಬಹುದು. ಬೆಟ್ಟದ ಬುಡದಲ್ಲಿ ವೆಂಕಟರಮಣ ಮತ್ತು ಲಕ್ಷ್ಮಿ ದೇವಸ್ಥಾನಗಳಿವೆ. ಎಣ್ಣೆ ಮತ್ತು ತುಪ್ಪವನ್ನು ಸಂಗ್ರಹಿಸಲು ಎರಡು ದೊಡ್ಡ ವೃತ್ತಾಕಾರದ ಕುಳಿಗಳಿದ್ದು, ಇನ್ನೂ ಉತ್ತಮ ಸ್ಥಿತಿಯಲ್ಲಿವೆ.

**ಉಪಸಂಹಾರ**


ಒಟ್ಟಾರೆ ಹೇಳುವುದಾದರೆ ತುಮಕೂರು ಜಿಲ್ಲೆಯ ಕೋಟೆಗಳು ಐತಿಹಾಸಿಕವಾಗಿ ಮಹತ್ವತೆಯನ್ನು ಹೊಂದಿದ್ದು, ಮುಂದಿನ ಪೀಳಿಗೆಗೆ ಇತಿಹಾಸವನ್ನು ತಿಳಿಸುವಲ್ಲಿ ಸಹಾಯಕವಾಗಿವೆ. ಹಿಂದೆ ರಾಜ ಮಹಾರಾಜರು ತಮ್ಮ ಪ್ರಜೆಗಳು ಮತ್ತು ಪ್ರದೇಶದ ಸಂರಕ್ಷಣೆಗಾಗಿ ಅಂದಿನ ಯುದ್ಧ ಕೌಶಲ್ಯಕ್ಕೆ ಅನುಗುಣವಾಗಿ ಶತ್ರುಗಳನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಲು ನಿರ್ಮಿಸಲಾಗುತ್ತಿತ್ತು. ಬದಲಾದ ಕಾಲಘಟ್ಟದಲ್ಲಿ ಈ ಕೋಟೆಗಳು ತಮ್ಮ ಮಹತ್ವ ಕಳೆದುಕೊಂಡು ಕೇವಲ ಐತಿಹಾಸಿಕ ಸ್ಮಾರಕಗಳಾಗಿ ಜೀವಂತವಾಗಿ ಉಳಿದಿವೆ.

**ಪರಾಮರ್ಶನ ಗ್ರಂಥಗಳು**



- ಅರುಣ (2015). ಬೆಳಗಾಂವ ಪ್ರದೇಶದ ಕೋಟೆ ಕೊತ್ತಲಗಳು: ಒಂದು ಅಧ್ಯಯನ, ಅಪ್ರಕಟಿತ ಪ್ರೌಢಪ್ರಬಂದ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ.
- ಬಡಿಗೇರ ಎಸ್. ವಿ. (2001). ಸವದತ್ತಿ ತಾಲೂಕಿನ ಕೋಟೆಗಳು. ಕನ್ನಡ ವಿಶ್ವವಿದ್ಯಾನಿಲ, ಧಾರವಾಡ.
- ದೇವರಾಯನ ದುರ್ಗ, ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ, ಮೈಸೂರು ವಿವಿ, ಮೈಸೂರು.
- ಎಪಿಗ್ರಪಿಯಾ ಕರ್ನಾಟಿಕ, ಶಾ.ಸಂ.31
- ಗೋಪಾಲ್ ಆರ್. (2009). ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುರಾತತ್ವ ಇಲಾಖೆ, ಮೈಸೂರು.
- ಜೋಶಿ ಎಸ್.ಕೆ. (1985). ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ. ರಜತ್ ಪಬ್ಲಿಕೇಷನ್, ನವದೆಹಲಿ.
- ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್ (1969), ತುಮಕೂರು ಜಿಲ್ಲೆ. ಕರ್ನಾಟಕ ಸರ್ಕಾರ, ಬೆಂಗಳೂರು.
- ಮಧುಗಿರಿ ಕೋಟೆ (2021). ತುಮಕೂರು ಜಿಲ್ಲೆ, ಕರ್ನಾಟಕ ಸರ್ಕಾರ, Tumkur District. https://tumkur.nic.in/
- ಮುದ್ದು ವೀರಪ್ಪ. (2011). ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು. ತುಮಕೂರು ವಿವಿ, ತುಮಕೂರು.

- ಪಾಟೀಲ ಸಿ. ಎಸ್ (1999). ಕರ್ನಾಟಕದ ಕೋಟೆ–ಕೊತ್ತಲಗಳು. ಸಂ–1, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- Directorate of Census Operations, Karnataka, Bangalore. (2001). *Distrlct census handbook Tumkur* (No. 1). http://lsi.gov.in:8081/jspui/bitstream/123456789/6329/1/37689_2001_TUM.pdf
- *Medigeshi Fort, Bangalore - Timings, History, Best time to visit*. (2020, November 10). Trawell.In. https://www.trawell.in/karnataka/bangalore/medigeshi-fort
- Wikipedia contributors. (2018, January 19). ಚನ್ನರಾಯನ ದುರ್ಗ. ವಿಕಿಪೀಡಿಯಾ. https://kn.wikipedia.org/wiki/ ಚನ್ನರಾಯನ_ದುರ್ಗ/


**ಅನುಬಂಧ 1: ಛಾಯಾಚಿತ್ರಗಳು**



ಮದುಗಿರಿ ಕೋಟೆ



ನಿಡುಗಲ್ ಕೋಟೆ



ಹುತ್ರಿದುರ್ಗದ ಕೋಟೆ




ಹುಲಿಯೂರು ದುರ್ಗದ ಪ್ರವೇಶ



ಹುಲಿಯೂರು ದುರ್ಗದ ಕೋಟೆಗೋಡೆ



ಚನ್ನರಾಯ ದುರ್ಗದ ಕೋಟೆ



ಪಾವಗಡ ಕೋಟೆ